-

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಪಿ.ಎ.ಭಜಂತ್ರಿ, ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೊಪ್ಪಳ ಇವರು ಅಮಾನತ್ತಿನಲ್ಲಿ ಕಳೆದ ಅವಧಿ ದಿ:22.12.2011 ರಿಂದ 29.12.2011 ರವರಗಿನ ಅವಧಿಯನ್ನು ಕ್ರಮಬದ್ಧಗೊಳಿಸುವ ಬಗ್ಗೆ.

ಓದಲಾಗಿದೆ:

1. *ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 46 ಇಎಸ್‌ಕ್ಯೂ 11, ದಿ:22.12.2011..*
2. *ಕೆ.ಎ.ಟಿ ಅರ್ಜಿ ಸಂಖ್ಯೆ:7960/11 ರಲ್ಲಿ ಮಧ್ಯಂತರ ತಡೆಯಾಜ್ಞೆ ದಿನಾಂಕ:27.12.2011.*
3. *ಕೆ.ಎ.ಟಿ ಅರ್ಜಿ ಸಂಖ್ಯೆ:7960/11 ರಲ್ಲಿ ಮಧ್ಯಂತರ ತಡೆಯಾಜ್ಞೆ ದಿನಾಂಕ:9.10.2012.*
4. *ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 391 ಜಿಪಅ 11, ದಿ:16.4.2015.*

ಪ್ರಸ್ತಾವನೆ

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೊಪ್ಪಳ ಇಲ್ಲಿನ ಕಾರ್ಯಪಾಲಕ ಇಂಜಿನಿಯರ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಪಿ.ಎ.ಭಜಂತ್ರಿ ಇವರು ಕುಡಿಯುವ ನೀರು, ರಸ್ತೆ ಸಂಪರ್ಕ ಸೇತುವೆ, ಚರಂಡಿ ಮುಂತಾದ ಕಾಮಗಾರಿಗಳಲ್ಲಿ ನಿಷ್ಕಾಳಜಿ ತೋರಿಸಿ, ಕರ್ತವ್ಯಲೋಪವೆಸಗಿರುತ್ತಾರೆ ಎಂಬ ಆರೋಪಗಳಿಗೆ ಸಂಬಂಧಿಸಿದಂತೆ ಮೇಲೆ ಓದಲಾದ ಕ್ರಮಾಂಕ (1) ರ ದಿನಾಂಕ:22.12.2011 ರ ಆದೇಶದಲ್ಲಿ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರಿಸಿ, ಅವರನ್ನು ಸೇವೆಯಿಂದ ಅಮಾನತ್ತುಪಡಿಸಲಾಗಿತ್ತು.

ಶ್ರೀ ಪಿ.ಎ.ಭಜಂತ್ರಿ ಇವರು ಅಮಾನತ್ತು ಆದೇಶವನ್ನು ಪ್ರಶ್ನಿಸಿ, ಮಾನ್ಯ ಕೆ.ಎ.ಟಿಯಲ್ಲಿ ಅರ್ಜಿ ಸಂಖ್ಯೆ:7960/11 ನ್ನು ದಾಖಲಿಸಿದ್ದರು. ಮಾನ್ಯ ಕೆ.ಎ.ಟಿಯು ಮೇಲೆ ಓದಲಾದ ಕ್ರಮಾಂಕ (2) ರ ದಿನಾಂಕ:27.12.2011 ರ ಮಧ್ಯಂತರ ಆದೇಶದಲ್ಲಿ ಶ್ರೀ ಪಿ.ಎ.ಭಜಂತ್ರಿ ಇವರ ಅಮಾನತ್ತು ಆದೇಶಕ್ಕೆ ತಡೆಯಾಜ್ಞೆ ನೀಡಿತ್ತು. ಮಾನ್ಯ ಕೆ.ಎ.ಟಿಯ ಮಧ್ಯಂತರ ತಡೆಯಾಜ್ಞೆಯನ್ನು ಅನುಸರಿಸಿ, ಶ್ರೀ ಪಿ.ಎ.ಭಜಂತ್ರಿ ಇವರು ಸರ್ಕಾರದ ಅನುಮತಿಯನ್ನು ನಿರೀಕ್ಷಿಸದೇ ನೇರವಾಗಿ ಪಂ.ರಾ.ಇಂ ವಿಭಾಗ, ಕೊಪ್ಪಳ ಇಲ್ಲಿ, ದಿನಾಂಕ:30.12.2011 ರಂದು ಕರ್ತವ್ಯಕ್ಕೆ ಹಾಜರಾಗಿರುವುದು ಕಂಡು ಬರುತ್ತದೆ.

ಶ್ರೀ ಪಿ.ಎ.ಭಜಂತ್ರಿ ಇವರು ಅಮಾನತ್ತು ಆದೇಶಕ್ಕೆ ಸಂಬಂಧಿಸಿದಂತೆ ಮಾನ್ಯ ಕೆ.ಎ.ಟಿಯಲ್ಲಿ ಸಲ್ಲಿಸಿದ್ದ ಅರ್ಜಿಗೆ ಮಾನ್ಯ ಕೆ.ಎ.ಟಿಯು ದಿನಾಂಕ:9.10.2012 ರಂದು ಅಂತಿಮ ಆದೇಶ ಹೊರಡಿಸಿ, ಅರ್ಜಿಯನ್ನು ವಜಾಗೊಳಿಸಿರುತ್ತದೆ.

ಶ್ರೀ ಪಿ.ಎ.ಭಜಂತಿ, ಹಿಂದಿನ ಕಾರ್ಯಪಾಲಕ ಇಂಜಿನಿಯರ್ ಮತ್ತು ಇತರೆ ಒಬ್ಬರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ನಡೆದಿದ್ದು ಮೇಲೆ ಓದಲಾದ ಕ್ರಮಾಂಕ (4) ರ ದಿನಾಂಕ:16.4.2015 ರ ಆದೇಶದಲ್ಲಿ ಶ್ರೀ ಪಿ.ಎ.ಭಜಂತ್ರಿ ಇವರ ವಿರುದ್ಧದ ಇಲಾಖಾ ವಿಚಾರಣೆಯಲ್ಲಿ ಸಾಭೀತಾದ ಆರೋಪಗಳಿಗೆ ಅನುಗುಣವಾಗಿ, ಕ.ನಾ.ಸೇ (ವ.ನಿ.ಮೇ)ನಿಯಮಗಳು 1957 ರ ನಿಯಮ 8(iii) ರಡಿ ಅವರ ಕಾಲಿಕ ವೇತನ ಶ್ರೇಣಿಯಲ್ಲಿ ಒಂದು ವಾರ್ಷಿಕ ವೇತನ ಬಡ್ತಿಯನ್ನು ಒಂದು ವರ್ಷದ ಅವಧಿಗೆ ಸಂಚಿತ ಪರಿಣಾಮ ರಹಿತವಾಗಿ ತಡೆಯಿಡಿಯುವ ದಂಡನೆಯನ್ನು ವಿಧಿಸಲಾಗಿರುತ್ತದೆ.

---2

ಶ್ರೀ ಪಿ.ಎ. ಭಜಂತ್ರಿ ಇವರನ್ನು ದಿನಾಂಕ:22.12.2011 ರಂದು ಅಮಾನತ್ತುಗೊಳಿಸಲಾಗಿದ್ದು, ಸದರಿಯವರು ಕೆ.ಎ.ಟಿಯ ದಿನಾಂಕ:27.12.2011 ರ ಮಧ್ಯಂತರ ತಡೆಯಾಜ್ಞೆಯನುಸಾರ ದಿನಾಂಕ:30.12.2011 ರಂದು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೊಪ್ಪಳ ಇಲ್ಲಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಸದರಿಯವರು ಅಮಾನತ್ತು ಆದೇಶಕ್ಕೆ ಮಾನ್ಯ ಕೆ.ಎ.ಟಿಯು ಮಧ್ಯಂತರ ತಡೆಯಾಜ್ಞೆ ನೀಡಿದ್ದರೂ ದಿನಾಂಕ:9.10.2012 ರ ಅಂತಿಮ ಆದೇಶದಲ್ಲಿ ಅಮಾನತ್ತನ್ನು ರದ್ದುಗೊಳಿಸುವುದಾಗಲಿ ಅಥವಾ ವಜಾಗೊಳಿಸುವುದಾಗಲಿ ಮಾಡಿರುವುದಿಲ್ಲ. ಅಲ್ಲದೆ, ಸದರಿಯವರ ವಿರುದ್ಧದ ಇಲಾಖಾ ವಿಚಾರಣೆಯಲ್ಲಿ ಆರೋಪಗಳು ಸಾಭೀತಾಗಿದ್ದು ಸಾಭೀತಾದ ಆರೋಪಗಳಿಗೆ ಅನುಗುಣವಾಗಿ ದಂಡನೆ ವಿಧಿಸಿರುವುದರಿಂದ ಶ್ರೀ ಪಿ.ಎಂ. ಭಜಂತ್ರಿ, ಕಾ.ಇಂ ಇವರನ್ನು ಸರ್ಕಾರವು ಅಮಾನತ್ತುಗೊಳಿಸಿದ್ದ ಕ್ರಮವು ಕ್ರಮಬದ್ಧವಾಗಿರುತ್ತದೆ. ಆದ್ದರಿಂದ, ಸದರಿಯವರು ಅಮಾನತ್ತಿನಲ್ಲಿ ಕಳೆದ ಅವಧಿ ದಿನಾಂಕ:22.12.2011 ರಿಂದ 29.12.2011 ರವರಗಿನ ಅವಧಿಯನ್ನು ಈ ಕೆಳಕಂಡಂತೆ ಕ್ರಮಬದ್ಧಗೊಳಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಆದ್ದರಿಂದ ಈ ಆದೇಶ:-

**ಆದೇಶ ಸಂಖ್ಯೆ:ಗ್ರಾಅಪ 239 ಜಿಪಅ 16, ಬೆಂಗಳೂರು, ದಿನಾಂಕ:11.05.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಪಿ.ಎ. ಭಜಂತ್ರಿ, ಕಾರ್ಯಪಾಲಕ ಇಂಜಿನಿಯರ್, ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೊಪ್ಪಳ ಇವರಿಗೆ ದಿನಾಂಕ:22.12.2011 ರಿಂದ 29.12.2011 ರವರಗೆ ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 100 (6) ರನ್ವಯ ಅಮಾನತ್ತಿನಲ್ಲಿಯೇ ಕಳೆದಿರುವ ಅವಧಿ ಎಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
11/05/2017
(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು,(ಎ ಮತ್ತು ಇ,) ಬೆಂಗಳೂರು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ.
4. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ,ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, (ಸೇವೆಗಳು-ಎ).
6. ಶ್ರೀ ಪಿ.ಎ.ಭಜಂತ್ರಿ, ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ವಿಜಯಪುರ.
7. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು,
8. ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಗ್ರಾ.ಅ.ಪಂ.ರಾಜ್ ಇಲಾಖೆ,
9. ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು. ಗ್ರಾ.ಅ.ಪಂ.ರಾಜ್ ಇಲಾಖೆ,
10. ಶಾಖಾ ರಕ್ಷಾ ಕಡತ, ಹೆಚ್ಚುವರಿ ಪ್ರತಿ, ಕಂಪ್ಯೂಟರ್ ಸೆಲ್